STOPPAGE OF WATER TO BOLLARE CHANNEL

57. Sri B. SATHYANARAYANA SINGH (Hospet).—

Will the Minister of State for Major Irrigation be pleased to state:—

(*a*) whether it is a fact that the water to Bollare channel was stopped from 1st May 1972 to 8th May 1972 without notice to Ayacutdars; if so, the reason for the same;

(*b*) whether it is a fact that the Superintending Engineer of the Tungabhadra Board refused to implement the order of the Chief Engineer of Tungabhadra Board with regard to the releasing of water to Gowramma and Vittalapur Tanks in Bellary District; if so, the action the Government has taken in the matter;

(*c*) whether it is a fact that P.W.D. Secretary who represents our State did not attend the crucial Tungabhadra Board meeting in this regard held in the month of May 1972; if so, the reason for the same?

Sri H. N. NANJE GOWDA (Minister of State for Major Irrigation).—

(*a*) Yes.

(*b*) No.

(*c*) Due to non-availability of seat in the Plane, the P.W.D. Secretary could not proceed to Hyderabad. Hence the Board meeting did not take place.

ಶ್ರೀ ಬಿ. ಸತ್ಯನಾರಾಯಣಸಿಂಗ್.—(ಅ) ಪ್ರಶ್ನೆಗೆ ಉತ್ತರವಾಗಿ ನಾಲೆಗೆ ನೀರನ್ನು ಬಿಡುವುದನ್ನು ನಿಲ್ಲಿಸಿದ್ದುದು ನಿಜವೇ ಎಂದು ಕೇಳಿದ್ದಕ್ಕೆ 'ನಿಜ'ವೆಂದು ಹೇಳಿದೆ. ಅದಕ್ಕೆ ಕಾರಣಗಳೇನು? ಆ ರೀತಿ ಹಠಾತ್ತಾಗಿ ನೀರನ್ನು ನಿಲ್ಲಿಸಿದಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದರಿಂದ ಸಾವಿರಾರು ರೂಪಾಯಿಗಳು ರೈತರಿಗೆ ಹಾನಿಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

†ಶ್ರೀ ಎಚ್. ಎನ್. ನಂಜೇಗೌಡ.—ಹಠಾತ್ತಾಗಿ ನೀರನ್ನು ನಿಲ್ಲಿಸಬೇಕಾದರೆ ಕಾರಣವೇನೆಂದರೆ ನೀರು ಬಿಡುವ ವ್ಯವಸ್ಥೆ ತುಂಗಭದ್ರಾ ಬೋರ್ಡಿನ ವತಿಯಲ್ಲಿದೆ. 2ನೇ ತಾರೀಖಿನಲ್ಲಿ ಈ ವಿಚಾರವನ್ನು ತಕ್ಷಣ ಸರ್ಕಾರದ ಗಮನಕ್ಕೆ ಸೂಪರಿಂಟೆಂಡಿಂಗ್ ಇಂಜನಿಯರ್ ತಂದರು. ಅದಾದನಂತರ ನಾವು ಅವರಿಗೆ ಈ ರೀತಿ ಮಾಡಿದ್ದು ಸರಿಯಲ್ಲವೆಂದು ತಿಳಿಸಿದ್ದೇವೆ. ಅದರ ಬಗ್ಗೆ 4ನೇ ತಾರೀಖಿನಲ್ಲಿ ಚೇರ್‌ಮನ್‌ಗೆ ಟೆಲಿಗ್ರಾಂ ಸಹ ಕೊಟ್ಟಿದೆ. ಪ್ರೋನಿನಲ್ಲಿಯೂ 6ನೇ ತಾರೀಕಿನಲ್ಲಿಯೇ ರಿಮೈಂಡ್ ಮಾಡಿದ್ದೇವೆ. 9ನೇ ತಾರೀಕಿನ ಹೊತ್ತಿಗೆ ಈ ನಾಲೆಯನ್ನು ಏಳು ದಿನಗಳಗಾಗಿ ರೆಸ್ಟೋಂ ಮಾಡ ರಾಯಿತು.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಎಲ್ಲಿ ತಪ್ಪಾಗಿದೆಯೋ ಅದನ್ನು ಕಂಡುಹಿಡಿದು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏತಕ್ಕೆ ಕ್ರಮವನ್ನು ತೆಗೆದುಕೊಳ್ಳಬಾರದು?

ಶ್ರೀ ಎಚ್. ಎನ್. ನಂಜೇಗೌಡ.—ಈ ನಾಲೆಗೆ ನೀರು ಬಿಡುವ ಅಧಿಕಾರ ತುಂಗಭದ್ರಾ ಬೋರ್ಡಿನ ವತಿಯಲ್ಲಿದೆ. ಅವರು ಅದರ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಂಡಿದ್ದಾರೆ. ಈ ವಿಚಾರವಾಗಿ ಈಗಾಗಲೇ ಬೋರ್ಡಿನ ಚೇರ್‌ಮನ್ ಅವರಿಗೆ ತಿಳಿಸಿ ಅವನ್ನು ರಿಕ್ಟಿಫೈ ಮಾಡಿಸಿದ್ದು ಆಯಿತು.

ಶ್ರೀ ಎಸ್. ಬಂಗಾರಪ್ಪ.—(ಇ) ಗೆ ಉತ್ತರವಾಗಿ ವಿಮಾನದಲ್ಲಿ ಸ್ಥಳಾವಕಾಶ ದೊರಕಿದ್ದುದರಿಂದ ಕಾರ್ಯನಿರ್ವಹಿಸಿಯವರು ಹೈದರಾಬಾದಿಗೆ ಹೋಗಲಾಗಲಿಲ್ಲವೆಂದು ಹೇಳಿದೆ. ಕಾರ್ಯದರ್ಶಿಯವರು ವಿಮಾನದಲ್ಲಿ ಹೋಗಬೇಕೆಂದಿದ್ದಾಗ ಮೊದಲೇ ಅಲ್ಲಿ ಸ್ಥಳವನ್ನು ಏಕೆ ರಿಜರ್ವ್ ಮಾಡಿಸಲಿಲ್ಲ ? ವಿಮಾನದಲ್ಲಿ ಸ್ಥಳವಿಲ್ಲವೆಂದು ತಿಳಿದುಬಂದಮೇಲೆ ಕೂಡಲೇ ಅಲ್ಲಿ ನೀರು ಬಿಡಿಸಲಿಕ್ಕೆ ಅವರು ಏಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಿಲ್ಲ ?

ಶ್ರೀ ಎಚ್. ಎನ್. ನಂಜೇಗೌಡ.—ಕೇವಲ 7 ದಿನಗಳಲ್ಲಿಯೇ ಅಲ್ಲಿನ ಕೊಂಪರೆಯನ್ನು ರೆಕ್ಟಿಫೈ ಮಾಡಿದ್ದಾಯಿತು.

ಶ್ರೀ ಕೋಣಂದೂರು ಲಿಂಗಪ್ಪ.—ತುಂಗಭದ್ರಾ ಬೋರ್ಡಿನ ಅಧ್ಯಕ್ಷರು ಯಾರು ಈಗಿರತಕ್ಕ ಅಧ್ಯಕ್ಷರು ಇದ್ದಾರೆ ಅವರು ಕೇಂದ್ರದ ನೀರಾವರಿ ಮಂತ್ರಿಗಳಾಗಿರುವ ಶ್ರೀ ಕೆ. ಎಲ್. ರಾವ್ ಅವರ ಸಬಾರ್ಡಿನೇಟ್ ಆಫೀಸರ್. ಅವರಿಂದ ನಮ್ಮ ರಾಜ್ಯಕ್ಕೆ ನ್ಯಾಯ ದೊರಕುವುದಿಲ್ಲ. ಅದರಿಂದ ಅನೇಕ ತೊಂದರೆಗಳು ಆಗುತ್ತಿವೆ. ಆದ್ದರಿಂದ ನಮ್ಮ ರಾಜ್ಯದವರೊಬ್ಬರನ್ನು ಪುರ್‌ಚೈಸ್ ಆಗಿ ಅಲ್ಲಿನ ಚೇರಮನ್‌ರಾಗಿ ನೇಮಿಸುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಆ ಬೋರ್ಡ್ ಆಕ್ಟ್ ಪ್ರಕಾರ ಕೇಂದ್ರ ಸರ್ಕಾರದವರೇ ಆಬೋರ್ಡಿನ ಅಧ್ಯಕ್ಷರನ್ನು ನೇಮಿಸುತ್ತಾರೆ. ಅಲ್ಲಿಗೆ ಜಾಯಿಂಟ್ ಸೆಕ್ರೆಟರಿ ಯಾರು ಇರಬೇಕೆಂಬುದನ್ನು ಕೇಂದ್ರಸರ್ಕಾರದವರೇ ತೀರ್ಮಾನ ಮಾಡಿದ್ದಾರೆ. ಅಕ್ಟಿನಲ್ಲಿ ಅರೀತಿ ಇದೆ. ಆದರೆ ಬೋರ್ಡನ್ನು ಅಬಾಲಿಷ್‌ಮಾಡುವುದು ಯೋಗ್ಯ ಸೂಚನೆ. ಅವಕ್ಕಾಗಿ ಸರ್ಕಾರ ಪ್ರಯತ್ನ ಮಾಡುತ್ತಿದೆ. ಒಟ್ಟಿನಲ್ಲಿ ಆ ಬೋರ್ಡನ್ನು ನಾವು ಕಾನ್‌ಸ್ಟಿಟ್ಯೂಟ್ ಮಾಡಿಲ್ಲ. ಅದರ ಆಕ್ಟ್ ಪ್ರಕಾರ ಕೇಂದ್ರಸರ್ಕಾರದವ್ಲರತಕ್ಕ ನೀರಾವರಿ ಶಾಖೆಯ ಉಪಕಾರ್ಯದರ್ಶಿಯವರೇ ಅಲ್ಲಿಗೆ ಚೇರಮನ್‌ರಾಗಿದ್ದಾರೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ನಿಜವಲ್ಲವೆಂದು ಹೇಳಿದೆ. ನಾನು ಅಲ್ಲಿನ ಚೇರ್‌ಮನ್‌ರಲ್ಲಿ ಸ್ಪೆಶಲ್ ಆರ್ಡರ್ ತೆಗೆದುಕೊಂಡು ಕೋಗಿ ಮಾತನಾಡಿದ ಮನುಷ್ಯ. ಅವರಿಗೆ ನಾನೇ ಖುದ್ದಾಗಿ ಕೇಳಿದರೂ ನಾನು ಆ ಆರ್ಡರನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಮೈಸೂರು ರಾಜ್ಯದ ಪರವಾಗಿ ಅಲ್ಲಿ ಒಬ್ಬ ಚೀಫ್ ಇಂಜನಿಯರ್ ಇಲ್ಲದೇ ಇರುವುದರಿಂದ ಈಗಲಾದರೂ ಒಬ್ಬ ಪುರ್‌ಚೈಸಿಂಗ್ ಚೀಫ್ ಇಂಜನಿಯರನ್ನು ಅಲ್ಲಿಗೆ ಕೂಡಲೇ ನೇಮಿಸಬೇಕೆಂದು ನಾನು ಈಗ ಸರ್ಕಾರವನ್ನು ಕೊಡುತ್ತಾ ಇದ್ದೇನೆ. ಅದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಎಚ್. ಎನ್. ನಂಜೇಗೌಡ.—ಕೆಲವು ಸಂದರ್ಭಗಳಲ್ಲಿ ಅವರು ಥೋರಣೆ ಮಾಡಿದ್ದೂ ಉಂಟು. ಮೈಸೂರು ರಾಜ್ಯದ ಚೀಫ್ ಇಂಜನಿಯರ್ ಅವರು ಕೊಡತಕ್ಕ ಹುಕುಂನ್ನು ಅವರು ಪಾಲಿಸುವುದರಲ್ಲಿ ಸ್ವಲ್ಪಮಟ್ಟಿಗೆ ಡಿಲೇ ಆಗಿರುವ ಪರಿಸ್ಥಿತಿಯೂ ಉಂಟು. ಚೀಫ್ ಇಂಜನಿಯರ್ ಅಪ್ಪಣೆಯಂತೆ ನಡೆಯಬೇಕಾಗಿತ್ತು. ಆ ರೀತಿ ಮೊದಲನಿಂದಲೂ ನಡೆಯುತ್ತಿದೆಯೆಂದು ತಿಳಿದು ಬಂದಿದೆ. ಇತ್ತೀಚೆಗೆ ಅಂತಹ ಥೋರಣೆ ಮಾಡಿರತಕ್ಕ ವಿಷಯ ಕಂಡುಬರುತ್ತಾ ಇಲ್ಲ. ಅಂತೂ ನಮ್ಮ ಚೀಫ್ ಇಂಜನಿಯರ್ ಅಲ್ಲರಬೇಕ . ಅಂತಹ ಥೋರಣೆ ಮೊದಲನಿಂದ ಅಲ್ಲಿ ಇದ್ದುದರಿಂದ ಸಾಮಾನ್ಯವಾಗಿ ನಾವು ಹಿಡಿತ ಇಟ್ಟುಕೊಳ್ಳುವುದು ಸ್ವಲ್ಪಮಟ್ಟಿಗೆ ಕಷ್ಟವಾಯಿತು ಆದ್ದರಿಂದ ಈಗ ಚೀಫ್ ಇಂಜನಿಯರ್‌ಗೆ ವರ್ಕ್‌ಲೋಡ್ ಎಷ್ಟಿದೆಯೆಂಬುದನ್ನು ಗಮನದಲ್ಲಿಟ್ಟುಕೊಂಡು ಈ ವಿಚಾರವನ್ನು ಪರಿಶೀಲಿಸಲಾಗುತ್ತದೆ.

SHIRAHATTI TALUK MARKETING SOCIETY

68. Sri V. V. WAI (Shirahatti).—

Will the Minister for Co-operation be pleased to state :—

(*a*) the reasons for the Shirahatti Taluk Marketing Society becoming idle ;

(*b*) whether Government is aware that on account of this, the Ryots are not able to get fertilisers, seeds and medicines, etc. ;